<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ</u>

<u>ಸಿ. ಸಿ. ನಂ.10258/2023</u>

ಪಿರ್ಯಾದುದಾರರು:- ಹೊಸಕೋಟೆ ಸಂಚಾರಿ ಪೊಲೀಸರು,

ವಿರುದ್ಧ

ಆರೋಪಿ:- ಭಾಸ್ಕರ್ ರೆಡ್ಡಿ ಬಿನ್ ವಿ. ವೆದ್ದರೆಡ್ಡಪ್ಪ, 42 ವರ್ಷ
ವಾಸ: ನಂ.81, ರೇಡಿಯನ್ಸ್ ಬ್ಲಾಸಮ್ ಲೇವೋಟ್,
ಮಂಡೂರು ಗ್ರಾಮ, ಬೂದಿಗೆರೆ ರಸ್ತೆ, ಬೆಂಗಳೂರು.

<u>ಆಪಾದನೆ</u>

ಶ್ರೀಮತಿ ಚೈತ್ರಾ ವ. ಕುಲಕರ್ಣಿ, ಬಿ.ಎ., ಎಲ್.ಎಲ್.ಬಿ., ಎಲ್.ಎಲ್.ಎಂ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ:05.10.2023 ರಂದು ಮಧ್ಯಾಹ್ನ 12:45 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ಹೊಸಕೋಟೆ ಸಂಚಾರಿ ಪೊಲೀಸ್ ಠಾಣಾ ಸರಹದ್ದು, ಹೊಸಕೋಟೆ ಟೋಲ್ ಹತ್ತಿರದ ರಾಷ್ಟ್ರೀಯ ಹೆದ್ದಾರಿ-75 ರಸ್ತೆಯಲ್ಲಿ ಆರೋಪಿಯಾದ ನೀವು ಕೆಎ-53-ಹೆಚ್.ಇ-8482 ಡಿಯೋ ಬೈಕ್ ಅನ್ನು ಅತಿ ವೇಗವಾಗಿ ನಿರ್ಲಕ್ಷತನದಿಂದ ರಸ್ತೆ ಮಧ್ಯ ಚಲಾಯಿಸಿಕೊಂಡು ಬಂದು, ಅದೇ ರಸ್ತೆಯಲ್ಲಿ ಹೊಸಕೋಟೆ ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಮೃತ ದರ್ಶನ್ ರವರ ಕೆ.ಎ.53-ಇ.ಕ್ಯೂ-4912 ಪ್ಯಾಶನ್ ಪ್ರೋರೋ ಬೈಕಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಅವರು ಕೆಳಗೆ ಬಿದ್ದು, ಸುಮಾರು 8-10 ಅಡಿಯಷ್ಟು ದೂರ ಉರಳಿಕೊಂಡು, ಅದೇ ರಸ್ತೆಯಲ್ಲಿ ಬರುತ್ತಿದ್ದ ಕೆ.ಎ.53-ಡಿ-7308 ಲಾರಿಯ ಎಡಭಾಗದ ಹಿಂಭಾಗದ ಚಕ್ರದ ಕೆಳಗೆ ಬಿದ್ದಿದ್ದು, ಸದರಿ ಲಾರಿಯ ಚಕ್ರ ಅವರ ತಲೆಯ ಬರುಡೆಯ ಮೇಲೆ ಹರಿದಿದ್ದರಿಂದ ಅವರು ಸ್ಥಳದಲ್ಲಿಯೇ ಮರಣ ಹೊಂದಿರುತ್ತಾರೆ ಎಂದು ಆರೋಪಿಸಲಾಗಿದೆ.

ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.279, 338, 304[ಎ]ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಸಕೋಟೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**
**ಸಿ. ಸಿ. ನಂ.10258/2023**

**ಪಿರ್ಯಾದುದಾರರು:–** **ಹೊಸಕೋಟೆ ಸಂಚಾರಿ ಪೊಲೀಸರು,**

**ವಿರುದ್ಧ**

**ಆರೋಪಿ:–** **ಭಾಸ್ಕರ್ ರೆಡ್ಡಿ ಬಿನ್ ವಿ. ವೆದ್ದರೆಡ್ಡಪ್ಪ, 42 ವರ್ಷ**
**ವಾಸ: ನಂ.81, ರೇಡಿಯನ್ಸ್ ಬ್ಲಾ ಸಮ್ ಲೇವೋಟ್,**
**ಮಂಡೂರು ಗ್ರಾಮ, ಬೂದಿಗೆರೆ ರಸ್ತೆ, ಬೆಂಗಳೂರು.**

## ಆಪಾದನೆ

**ಪ್ರಶ್ನೆ1:** **ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?**

**ಉತ್ತರ:**

**ಪ್ರಶ್ನೆ2:** **ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?**

**ಉತ್ತರ:**

**ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 24.04.2025 ರಂದು ಧೃಢೀಕರಿಸಿದ್ದೇನೆ.**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**